

# ಕುಡಿತವನ್ನು ಮರೆತ ಕುಡುಕನು

ಕುಡಿತವನ್ನು ಮರೆತ ಕುಡುಕನು

ನಮ್ಮ ದೇಶದಲ್ಲಿ ಉನ್ನತ ಪದವಿಯಲ್ಲಿರುವಂತ ಒಬ್ಬರಿಗೆ ನೀವು ಬಹು ಹತ್ತಿರದ ಸಂಬಂಧಿಕರೇನಾದರೂ ಆಗಿದ್ದರೆ ಎಷ್ಟು ಹೆಮ್ಮೆ ಪಡುತ್ತಿದ್ದಿರಿ ಅವರಿಗಿರುವ ಗೌರವ, ಹೆಸರು ನಿಮಗೂ ಇರುತಿತ್ತಲ್ಲವೆ? ಉನ್ನತಪದವಿ ಯಲ್ಲಿರುವ ಆ ಸಂಬಂಧಿಕರ ಹೆಸರನ್ನು ಹೇಳಿಯೇ ಎಲ್ಲಾ ಕೆಲಸಗಳನ್ನು ಮಾಡಿಕೊಳ್ಳುತ್ತೇವೆ. ನಮ್ಮ ಅವಶ್ಯಕತೆಗಳನ್ನೆಲ್ಲಾ ಪೂರೈಸಿಕೊಳ್ಳುತ್ತೇವೆ.

ಈ ಕರಪತ್ರವನ್ನು ಓದುವ ನಿಮಗೆ ನಾನು ಒಬ್ಬ ಹೊಸ ವ್ಯಕ್ತಿಯನ್ನು ಪರಿಚಯಿಸಲು ಇಚ್ಚಿಸುತ್ತೇನೆ, ಆತನಿಗೆ ನೀವು ಸಂಬಂಧಿಕರಾಗಿಬಿಟ್ಟರೆ,ಆತನ ಹೆಸರನ್ನು ಹೇಳಿಯೇ ಅಥವಾ ಉಪಯೋಗಿಸಿಯೆ ನಿಮಗೆ ಬೇಕಾದ ಎಲ್ಲಾ ಕಾರ್ಯಗಳನ್ನು ಆಶೀರ್ವಾದಗಳನ್ನು ಹೊಂದಿಕೊಳ್ಳಬಹುದು.

ಆತನು ಯಾರು ಗೊತ್ತೆ? ಈ ಆಕಾಶವನ್ನು ಭೂಮಿಯನ್ನು ಉಂಟು ಮಾಡಿದ ಸೃಷ್ಠಿಕರ್ತನು. 'ಯೇಸು' ಎಂಬುದು ಆತನ ನಾಮಧೇಯೇ.

ನಾವು ಯೇಸುವಿನ ಮಕ್ಕಳುಗಳಾಗಿ ಬದಲಾದರೆ,ಆತನು ನಮಗೆ ತಂದೆಯಾಗಿ ಬದಲಾಗುವನು. ಆತನಿಗೆ ಮಕ್ಕಳಾಗಿ ಬದಲಾಗುವದು ಎಂಬುವದು ಆತನನ್ನು ನಿಮ್ಮ ಹೃದಯದಲ್ಲಿ ಅಂಗೀಕರಿಸಿಕೊಳ್ಳುವಂತದ್ದೆ. ಯೇಸುವಿನ ಮಕ್ಕಳಾಗಿ ಬದಲಾದಂತ ನೀವು ಆತನ ಹೆಸರನ್ನು ಉಪಯೋಗಿಸಿ ಏನನ್ನು ಕೇಳಿದರು ಆತನು ನಿಶ್ಚಯವಾಗಿ ಕೊಡುತ್ತಾನೆ.

ಚಿಕ್ಕ ಒಂದು ಗ್ರಾಮಕ್ಕೆ ಯೇಸುವಿನ ಪ್ರೀತಿಯ ಬಗ್ಗೆ ಸಾರಲು ಒಬ್ಬ ದೇವಸೇವಕರು ಹೋಗಿದ್ದರು. ಆಗ ಅಲ್ಲಿದ್ದಂತ ಒಂದು ಕೊಳದ ಬಳಿ ಮಧ್ಯಪಾನ ಮಾಡಿ ಮತ್ತನಾಗಿ ಬಿದ್ದಿದ್ದಂತ ಒಬ್ಬ ಕುಡುಕನನ್ನು ನೋಡಿದರು. ಅನಂತರ ಅವನು ಎಚ್ಚರಗೊಂಡು ಎದ್ದು ಕೊಳದಲ್ಲಿ ತನ್ನ ಮುಖವನ್ನು ತೊಳಕೊಂಡುಬಂದನು. ಈ ಕುಡುಕನ ಎಲ್ಲಾ ಚಟುವಟಿಕೆಗಳನ್ನು ಗಮನಿಸುತ್ತಾ ನಿಂತಿದ್ದ ಸೇವಕರು ಅವನನ್ನು ಒಂದು ಮಾವಿನಮರದಡಿಯಲ್ಲಿ ಕುಳಿರಿಸಿ, ನಿಧಾನವಾಗಿ ಅವನೊಂದಿಗೆ ಮಾತಾಡಲು ತೊಡಗಿದರು. "ನಿನ್ನನ್ನು ನಿನ್ನ ಕುಟುಂಬವನ್ನು ಹಾಳುಮಾಡುವ ಈ ಕುಡುಕುತನವನ್ನು ಬಿಟ್ಟು ಬಿಡು" ಎಂದು ಪ್ರೀತಿಯಿಂದ ಹೇಳಿದನು. ತಕ್ಷಣ ಆ ಕುಡುಕನು, "ಇದರ ಬಗ್ಗೆ ಮಾತ್ರ ನನ್ನ ಬಳಿ ಮಾತಾಡಬೇಡಿ.ನಾನು ಕುಡುಕುತನವನ್ನು ಬಿಡಲು ಅನೇ ಕಬಾರಿ ಪ್ರಯತ್ನಿಸಿದಾಗ್ಯೂ ಸಾಧ್ಯವಾಗಲಿಲ್ಲ. ಈಗಲೂ ಕೂಡ ಸಾಲ ಮಾಡಿಯೇ ಕುಡಿದು ಬಂದಿದ್ದೇನೆ. ನನ್ನಿಂದ ಈ ಅಭ್ಯಾಸವನ್ನು ಸಾಯೋತನಕ ಬಿಡಲು ಸಾಧ್ಯವೇ ಇಲ್ಲ," ಸ್ವಾಮಿ ನನ್ನನ್ನು ಬಿಟ್ಟುಬಿಡಿರಿ. ಅಂದನು.

ತಕ್ಷಣ ಆ ಸೇವಕರು ಅವನಿಗೆ, "ನಾನು ಹೇಳುವ ಒಂದು ಚಿಕ್ಕ ಕಾರ್ಯ ವನ್ನು ಅಭ್ಯಾಸವನ್ನು ಮಾಡಿ ನೋಡು. ಅದು ಒಂದೇ ಒಂದು ಚಿಕ್ಕ ಹೆಸರು ಮಾ ತ್ರ ಅದನ್ನು ನಿನಗೆ ಹೇಳಿಕೊಡುತ್ತೇನೆ ನಿಜವಾಗಲೂ ಈ ಕೆಟ್ಟಚಟವು ನಿನ್ನ ಬಾಳನ್ನು ಬಿಟ್ಟುಹೋಗಿಬಿಡುತ್ತದೆ" ಅಂದರು.ಅದಕ್ಕೆ ಅವನು, "ನಾನು ಎಷ್ಟೆಷ್ಟೋ ಪ್ರಯತ್ನಿ ಸಿದಾಗ್ಯೂ ಈ ಚಟವು ನನ್ನನ್ನು ಬಿಟ್ಟುಹೋಗಲಿಲ್ಲ. ಸರಿ ನೀವು ಹೇಳುವದನ್ನು ಕೊನೆಯದಾಗಿ ಒಂದು ಸಾರಿ ಪ್ರಯತ್ನಿಸಿ ನೋಡಿಬಿಡುತ್ತೇನೆ. ಯಾವುದೋ ಒಂದು ಚಿಕ್ಕ ಹೆಸರು ಎಂದು ಬೇರೆ ಹೇಳುತ್ತಿದ್ದೀರಾ ಸರಿ ಅದೇನಂತ ಹೇಳಿ? ಎಂದು ಕಾತುರದಿಂದ ಕೇಳಿದನು.

ಅವರು ಅವನಿಗೆ ಅದು 'ಯೇಸು' ಎಂದು ಹೇಳಿಕೊಟ್ಟರು. ಅವನು ಅದನ್ನು ಮರೆತುಹೋಗದಂತೆ ಮತ್ತೆ ಮತ್ತೆ ಅದನ್ನು ಹೇಳಿಸುತ್ತಲೇ ಇದ್ದರು. ಅವನು ಆ ಹೆಸರನ್ನು ಬಹು ಸುಲಭವಾಗಿ ಕಲಿತುಕೊಂಡು ಮನದಟ್ಟುಮಾಡಿ ಕೊಂಡನು. ಆ ಹೆಸರನ್ನು ಹೇಳುತ್ತಲೇ ತನ್ನ ಮನೆಗೆ ಹೋದನು.

ಇವನು 'ಯೇಸು' 'ಯೇಸು' ಎಂದು ಹೇಳುತ್ತಾ ಬರುತ್ತಿರುವಂ ತದ್ದನ್ನು ಕಂಡಂತ ಅವನ ಹೆಂಡತಿ,"ನೀನು ಈವತ್ತು ಹೆಚ್ಚಾಗಿ ಕುಡಿದುಬಂದು ಅದೇನೇನ್ನನ್ನೋ ಪೇಚಾಡುತ್ತಿದ್ದಿಯೇ" ಎಂದು ಹೇಳಿದಾಗ, ಆ ಕುಡುಕನು ಅಂದು ನಡೆದಂತ ಎಲ್ಲಾ ಸಂಗತಿಯನ್ನು ವಿವರವಾಗಿ ಆಕೆಗೆ ವಿವರಿಸಿದನು. ಯೇಸು ಎಂಬ ಹೆಸರನ್ನು ಮೂರು ದಿನದ ಮಟ್ಟಿಗೂ ತನ್ನ ಬಾಯಲ್ಲಿ ಉಚ್ಚರಿಸುತ್ತಲೇ ಇದ್ದದರ ನಿಮಿತ ಅವನು ಕುಡಿಯಲು ಹೋಗಲೇ ಇಲ್ಲ. ಹಾಗೆಯೇ ಕೆಲವು ದಿನಗಳು ಉರುಳಿದವು ಯಾವಾಗಲೂ ತಮ್ಮೊಂದಿಗೆ ಕುಡಿಯಲು ಬರುವವರು ಇವನನ್ನು ಕಾಣದ ಇವನ ಕುಡುಕು ಸ್ನೇಹಿತರು ಹುಡುಕಿಕೊಂಡು ಮನೆಗೇ ಬಂದುಬಿಟ್ಟರು. ಅವರನ್ನು ನೋಡಿದ ಸಂತೋಷದಲ್ಲಿ ಅವರುಗಳು ಇವನನ್ನು ಕರೆದದರ ನಿಮಿತ ತಕ್ಷಣವೇ ಸಾರಾಯಿ ಅಂಗಡಿಗೆ ಹೊರಟನು.

ಅರ್ಧ ದೂರಕ್ಕೆ ಹೋದ ನಂತರ ಇವನ ಬಳಿ ಆ ದೇವ ಸೇವಕರು ಪ್ರೀತಿಯಿಂದ ಮಾತಾಡಿದ ಆ ಮಾತುಗಳು ಇದ್ದಕಿದ್ದಂತೆ ನೆನಪಿಗೆ ಬಂದವು. ಆದರೆ ಅವರು ಹೇಳಿಕೊಟ್ಟ ಹೆಸರು ಅವನ ನೆನಪಿಗೆ ಬರಲಿಲ್ಲ. "ಅಯ್ಯೋ ನಾನು ಅವರು ಹೇಳಿಕೊಟ್ಟಂತ ಹೆಸರನ್ನು ಮರೆತುಬಿಟ್ಟೆನಲ್ಲಾ" ಎಂದು ಗೊಣಗುತ್ತಲೇ ಹೊದನು. ಸಾರಾಯಿ ಅಂಗಡಿಯ ಹತ್ತಿರಕ್ಕೆ ಹೋದ ತಕ್ಷಣವೆ ಮರೆತು ಹೋಗಿದ್ದ ಆ ಹೆಸರು ದೀಢಿರೆಂದು ನೆನಪಿಗೆ ಬಂತು ಅವನು ತಕ್ಷಣ ಯೇಸು ಯೇಸು ಎಂದು ಕೂಗಲು ಆರಭಿಸಿದನು. ಸ್ನೇಹಿತರುಗಳು ಎಲ್ಲರು ಅವನನ್ನು ಗೇಲಿಮಾಡಲು ತೊಡ ಗಿದರು."ನಾನು ಇನ್ನು ಮುಂದೆ ಕುಡಿಯುವದಿಲ್ಲ ನನ್ನನ್ನು ಬಿಟ್ಟುಬಿಡಿರಿ." ಎಂದು ತನ್ನ ಸ್ನೇಹಿತರುಗಳ ಬಳಿ ಹೇಳಿ ನಂತರ ಆ ಬಲವಾದ ಹೆಸರನ್ನು ಉಚ್ಚರಿಸುತ್ತಲೇ ಮನೆಗೆ ಹೋದನು. ಅಂದಿನಿಂದ ಅವನು ಆ ಕುಡಿತನದ ಮೇಲೆ ಇಟ್ಟಿದ್ದಂತ ಆಸೆ ಆಕಾಂಕ್ಷೆಗಳು ಸತ್ತುಹೋದವು.

ಪ್ರಿಯರೇ, ಕುಡುಕುತನದ ಪಾಪದಿಂದ ಅವನನ್ನು ಬಿಡಿಸಿದಂತದ್ದು ಯೇಸು ಎಂಬ ಬಲವುಳ್ಳ ನಾಮವೆ.ಇಂದು ಕೂಡ ನೀವು ಯೇಸು ಎಂಬ ನಾ ಮವನ್ನು ಉಚ್ಚರಿಸುವಾಗ ಆ ಯೇಸು ನಿಮ್ಮನ್ನು ನಿಮ್ಮ ಪಾಪಗಳಿಂದ ಬಿಡಿಸಿ ಕಾಯ್ದುಕೊಳ್ಳುವನು.ಯೇಸು ಎಂಬ ಮಹಾಬಲವುಳ್ಳ ಹೆಸರನ್ನು ಉಪ ಯೋಗಿಸಿ ನೀವು ಕೇಳುವಾಗ, ನಿಮ್ಮನ್ನು ಕಳಂಕಪಡಿಸುವ ಪಾಪ, ಶಾಪ, ವ್ಯಾಧಿ, ದರಿದ್ರ, ವೇದನೆ, ಕಷ್ಟ,ಇವೆಲ್ಲವುಗಳಿಂದಲೂ ಆತನು ನಿಮ್ಮನ್ನು ಬಿಡಿಸಿ ನಿಮ್ಮ ಬಾಳನ್ನು ಆಶೀರ್ವಾದಿಸುವನು.

*ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು.*

*(ಯೋಹಾನ 14:14)*

**VOICE OF JESUS PUBLICATIONS**
P.O.Box:6,Ramanathapuram.
623501. S.Inidia.
Phone: 98941 31211- 94423 22264
Email: vojpulication@gmail.com

**VOICE OF JESUS MEDIA**
P.O.Box:7206,Bangalore- 560 072.
Ph: 9731722977
Email: vojmedia@gmail.com

ಈ ಕರಪತ್ರಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ ಮಾರಾಟ ಮಾಡುವುದಿಲ್ಲ

VOJ.TRACTS/2013/KANNADA